ಓಎಸ್ಃ 753/2006 ಪಿಡಬ್ಲ್ಯುಃ 1 ಮರಿದೇವಮ್ಮ

ಸಾಕ್ಷಿಯನ್ನು ದಿಃ 21.01.2020 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.

ಪಾಟೀ ಸವಾಲುಃ 7 ರಿಂದ 12 ನೇ ಪ್ರತಿವಾದಿಯರ ಪರ ಶ್ರೀ ಸಿಎಜಿ ವಕೀಲರಿಂದಃ

ನಾನು ಮತ್ತು ಪ್ರತಿವಾದಿ 1 ರಿಂದ 3 ಅಕ್ಕತಂಗಿಯರು ಇರುತ್ತೇವೆ ಎಂದರೆ ಸರಿ. ನಮ್ಮ ತಂದೆ ಜೊತೆ ಗೌಡಯ್ಯ ಮತ್ತು ಕರೀಗೌಡ ಎಂಬ ಇಬ್ಬರು ಸಹೋದರರು ಇರುತ್ತಾರೆ. ಅವರ ಪೈಕಿ ನನ್ನ ತಂದೆ ಹಿರಿಯರು ಇರುತ್ತಾರೆ ಎಂದರೆ ಸರಿ. ನನ್ನ ತಂದೆಯ ಜೀವಂತ ಕಾಲದಲ್ಲಿ ನಮ್ಮ ಚಿಕ್ಕಪ್ಪಂದಿರು ನಮ್ಮ ತಂದೆಯ ಭಾಗವನ್ನು ಪಂಚಾಯ್ತಿ ಪಾರಿಕತ್ತಿನ ಮೂಲಕ ನಮಗೆ ಬಿಟ್ಟು ಕೊಟ್ಟಿದ್ದರು ಎಂದರೆ ಸರಿಯಲ್ಲ. ಸಃನಂಃ 24/1 ಮತ್ತು 25/1 ರ ಸ್ವತ್ತು ನಮ್ಮ ತಾತನ ಹೆಸರಿನಲ್ಲಿ ಇರುತ್ತದೆ. ಆ ಬಗ್ಗೆ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನಾನು ಹಾಜರು ಪಡಿಸಿರುವ ನಿಪಿ. 14, 17 ಮತ್ತು 18 ಪಹಣಿ ಪತ್ರಿಕೆಗಳಲ್ಲಿ ಸದರಿ ಜಮೀನು ಗೌಡಯ್ಯ ರವರ ಪಾಲಿಗೆ ಬಂದಿದ್ದು ಇರುತ್ತದೆ ಎಂದು ನಮೂದಾಗಿರುತ್ತದೆ ಎಂದರೆ ಸರಿಯಲ್ಲ. ಈ ಹಿಂದೆಯೇ ನಮ್ಮ ಕುಟುಂಬದಲ್ಲಿ ವಿಭಾಗ ಆಗಿ ನಾನು ಮತ್ತು ನನ್ನ ಸಹೋದರಿಯರು ಪ್ರತ್ಯೇಕ ಸ್ವಾಧೀನಾನುಭವದಲ್ಲಿ ಇರುತ್ತೇವೆ ಎಂದರೆ ಸರಿಯಲ್ಲ. ನನಗೆ ಬಂದಿದ್ದ ಆಸ್ತಿಯನ್ನು 8 ನೇ ಪ್ರತಿವಾದಿಗೆ ನಾನು ಕ್ರಯ ಮಾಡಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಅನುಸೂಚಿ 5 ನೇ ಸ್ವತ್ತಿನಲ್ಲಿ ನನ್ನ ಅಕ್ಕ 1 ನೇ ಪ್ರತಿವಾದಿ ತಿಮ್ಮಮ್ಮನ ವಾರಸುದಾರರು ವಾಸವಾಗಿರುತ್ತಾರೆ ಎಂದರೆ ಸರಿ. ನಾನು ಊರಿನಲ್ಲಿ ವಾಸವಾಗಿಲ್ಲದ ಕಾರಣ ನನ್ನ ಭಾಗವನ್ನು ಮಾರಾಟ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಈಗ ವಿಭಾಗ ಆಗಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಚಿಕ್ಕಪ್ಪ ಕರೀಗೌಡರಿಗೆ ಒಬ್ಬಳೇ ಮಗಳು 4 ನೇ ಪ್ರತಿವಾದಿ ತಿಮ್ಮಮ್ಮ ಇರುತ್ತಾಳೆ. ಜಮೀನಿನ ಬೆಲೆ ಹೆಚ್ಚಾಗಿರುವ

ಕಾರಣ ಈಗ ಸುಳ್ಳು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನನಗೆ ದಾವಾಸ್ವತ್ತಿನಲ್ಲಿ ಈಗ ಯಾವುದೇ ಭಾಗ ಇರುವುದಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ನನ್ನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ.

ಸಹಿ/-
ಹೆಚ್ಚುವರಿ ಲಘು ವ್ಯವಹಾರಗಳ ನ್ಯಾಯಾಧೀಶರು
ಮತ್ತು ಎಂ.ಎ.ಸಿ.ಟಿ., ಮೈಸೂರು.